





## ಚೆಲುವಿನ ಚಿತ್ತಾರ

# ಫ್ಲಾಕ್ಸ್

■ ಚಿತ್ರ–ಬರಹ:
**ಪೂರ್ಣಿಮಾ ಕಾನಹಳ್ಳಿ**

ನಕ್ಷತ್ರಾಕಾರದ ಈ ಹೂವಿನ ಚೆಲುವು ಪರವಶಗೊಳಿಸುತ್ತದೆ. ನೀಲಿ, ಬಿಳಿ, ಕೆಂಪು, ಗುಲಾಬಿ, ಇನ್ನೂ ಹಲವು ಮಿಶ್ರ ವರ್ಣಗಳಲ್ಲಿ ಈ ಹೂಗಳು ಅರಳುತ್ತವೆ. ಮನೆಯ ಆವರಣದ ಅಂಚಿನಲ್ಲಿ ಬಣ್ಣ ಬಣ್ಣದ ಗಗನದ ಚುಕ್ಕಿಗಳು ಮಿನುಗುವಂತಹ ಮೋಹಕ ನೋಟವನ್ನು ಇವು ಸೃಷ್ಟಿಸುತ್ತವೆ. ವಿಶೇಷವೆಂದರೆ ಹಗಲಿಡೀ ಸುಮ್ಮನೆ ಅರಳುವ ಫ್ಲಾಕ್ಸ್ , ಸಂಜೆಯ ಹೊತ್ತಿಗೆ ಮನಸೂರೆಗೊಳ್ಳುವ ಸಂಜೆ ಮಲ್ಲಿಗೆಯಂತಹ ಸುಗಂಧ ಹರಡುತ್ತದೆ. ಇದರ ಉನ್ಮಾದಗೊಳಿಸುವಂತ ಪರಿಮಳ ಎಂತಹವರನ್ನೂ ಪರವಶಗೊಳಿಸುತ್ತದೆ. ಮಡಿಕೇರಿಯ ರಾಜಾ ಸೀಟ್‌ನಲ್ಲಿ ಒಮ್ಮೊಮ್ಮೆ ಈ ಹೂಗಳ ದೃಶ್ಯ ವೈಭವ ಕಾಣಸಿಗುತ್ತದೆ.

ಅತೀ ನಾಜೂಕಾದ ಈ ಹೂವಿಗೆ ಬಿಸಿಲಿನ ವಾತಾವರಣ ಸೂಕ್ತ. ವರ್ಷವಿಡೀ ಅರಳುತ್ತದೆ. ಉತ್ತರ ಅಮೆರಿಕಾ ಇದರ ಮೂಲ. ಸುಮಾರು 6 ರಿಂದ 18 ಇಂಚಿನಷ್ಟು ಎತ್ತರ. ವಿದೇಶಗಳಲ್ಲಿ ಕಿಟಕಿಗಳ ಅಲಂಕಾರಕ್ಕಾಗಿ ಪುಟ್ಟ ಪುಟ್ಟ ಕುಂಡಗಳಲ್ಲಿ ಬೆಳೆಸಿರುತ್ತಾರೆ. ಬಣ್ಣ ಬಣ್ಣದ ಈ ಹೂಗಳ ಸಮೂಹವನ್ನು ಮಿನುಗುವ ಆಭರಣವೆಂದು ಅಲ್ಲಿ ವರ್ಣಿಸುತ್ತಾರೆ. ಗ್ರೀಸ್‌ನಲ್ಲಿ ಈ ಹೂವನ್ನು ಸಾಮರಸ್ಯ ಬೀರುವ ಸುಂದರ ಕನಸು ಎಂದು ಕರೆಯುತ್ತಾರೆ.

ಎಂತಹ ಮಣ್ಣಿನಲ್ಲೂ ಹೊಂದಿಕೊಂಡು ಬೆಳೆಯುತ್ತದೆ. ಹದ ನೋಡಿ ನೀರೆರೆಯಬೇಕು. ಬೀಜಗಳಿಂದ ವಂಶಾಭಿವೃದ್ಧಿ ಮಾಡಬಹುದು. ಅಲಂಕಾರಿಕ ಹೂಗಳಲ್ಲಿ ಫ್ಲೋಕ್ಸ್‌ಗೆ ಪ್ರಮುಖ ಸ್ಥಾನವಿದೆ. ●